**ಓ.ಎಸ್. ನಂ. 81/2024** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 21.2.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ದಿನಾಂಕ 6.5.1945 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ1 ಎಂದು, ಎಂಟು ಕೈಬರಹ ಪಹಣಿಗಳ ದೃಢೀಕೃತ ನಕಲನ್ನು ನಿಪಿ2 ರಿಂದ ನಿಪಿ9 ಎಂದು, ಆರು ಗಣಕೀಕೃತ ಪಹಣಿಗಳನ್ನು ನಿಪಿ10 ರಿಂದ ನಿಪಿ15 ಎಂದು, ದಿನಾಂಕ 17.2.2020 ರ ಮೂರು ಹಿಂಬರಹಗಳನ್ನು ನಿಪಿ16 ರಿಂದ ನಿಪಿ18 ಎಂದು, ಎರಡು ಅಹವಾಲು ತಖ್ತೆಗಳ ದೃಢೀಕೃತ ನಕಲನ್ನು ನಿಪಿ19 ಮತ್ತು ನಿಪಿ20 ಎಂದು, ದಿನಾಂಕ 28.6.2024 ರಂದು ಪ್ರತಿವಾದಿಯರಿಗೆ ವಕೀಲರ ಮೂಲಕ ನೀಡಿರುವ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ21 ಎಂದು, ಮೂರು ಅಂಚೆ ರಶೀದಿಗಳನ್ನು ನಿಪಿ22 ರಿಂದ ನಿಪಿ24 ಎಂದು, ಎರಡು ಅಂಚೆ ಸ್ವೀಕೃತಿಗಳನ್ನು ನಿಪಿ25 ಮತ್ತು ನಿಪಿ26 ಎಂದು, ಅಂಚೆ ಇಲಾಖೆಯ ವೆಬ್‌ಸೈಟಿನಿಂದ ಪಡೆದುಕೊಂಡಿರುವ ಟ್ರಾಕ್ ಕನ್‌ಸೈನನ್ನು ನಿಪಿ27 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರು ಲಿಖಿತ ಹೇಳಿಕೆ ಸಲ್ಲಿಸದಿರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.